# ವಿಶ್ವ ದರ್ಶನ

ಡಾ. ವಿಜಯ ಸಂಕೇಶ್ವರ ಮೀಡಿಯಾ ಸ್ಕೂಲ್ ಪ್ರಾಯೋಗಿಕ ಪತ್ರಿಕೆ

25 -10-2025 ಶನಿವಾರ | ಸಂಪುಟ-3 | ಸಂಚಿಕೆ- 2 | ಪುಟಗಳು-2


**ನುಡಿಮುತ್ತು**

ಕಲಿಯಲು ತಿರಸ್ಕರಿಸುವುದು ಜೀವಿಸಲು ತಿರಸ್ಕರಿಸುವುದಕ್ಕೆ ಸಮನಾದುದು

- ರಾಮಕೃಷ್ಣ ಪರಮಹಂಸ



## ಪೋಲೀಸ್ ಹುತಾತ್ಮ ದಿನ

1959 ಅಕ್ಟೋಬರ್ 21ರಂದು ಭಾರತ -ಚೀನಾದ ಗಡಿಯಲ್ಲಿ ಉದ್ವಿಗ್ನತೆ ಹೆಚ್ಚಾಗಿ ಲಡಾಖ್ನ ಹಾಟ್ ಸ್ಪ್ರಿಂಗ್ನಲ್ಲಿ ಕರ್ತವ್ಯದಲ್ಲಿದ್ದ 10 ಭಾರತೀಯ ಪೊಲೀಸರ ಮೇಲೆ ಚೀನಾದ ಸೈನಿಕರು ಯಾವುದೇ ಪ್ರಚೋದನೆ ಇಲ್ಲದ ಭಾರತೀಯ ಪೊಲೀಸರ ಮೇಲೆ ಹೊಂಚುದಾಳಿ ಮಾಡಿದರು. ಈ ದಾಳಿಯಲ್ಲಿ ಹಲವು ಪೋಲಿಸರು ಗಾಯಗೊಂಡರೆ, ಹಲವರು ಮೃತರಾದರು. ಘಟನೆಯು 23 ದಿನದ ನಂತರ, ನವೆಂಬರ್ 13,1959ರಂದು ಹುತಾತ್ಮ ಸಿಬ್ಬಂದಿಗಳ ಶವವನ್ನು ಭಾರತಕ್ಕೆ ಹಿಂತಿ-ರುಗಿಸಲಾಯಿತು. ನಂತರ ಶವಗಳನ್ನು ಪೂರ್ಣ ಮಿಲಿಟರಿ ಗೌರವದೊಂದಿಗೆ ಅಂತ್ಯಕ್ರಿಯೆ ಮಾಡಲಾಯಿತು. 1956ರ ಜನವರಿಯಲ್ಲಿ ನಡೆದ ಪೊಲೀಸ್ ಮಹಾನಿರ್ದೇಶನದ ವಾರ್ಷಿಕ ಸಮ್ಮೇಳನದಲ್ಲಿ, ತಮ್ಮ ಪ್ರಾಣವನ್ನು ದೇಶಕ್ಕಾಗಿ ಅರ್ಪಿಸಿದ ಧೈರ್ಯಶಾಲಿ ಹುತಾತ್ಮ ಪೊಲೀಸರ ಸ್ಮರಣೆಗೋಸ್ಕರ ಅಕ್ಟೋಬರ್ 21 ರಂದು ಪೋಲಿಸ್ ಹುತಾತ್ಮ ದಿನ ಎಂದು ಆಚರಿಸಲು ಪ್ರಾರಂಭಿಸಲಾಯಿತು. ಈ ಸಂದರ್ಭದಲ್ಲಿ ಎಲ್ಲಾ ಹುತಾತ್ಮ ಪೊಲೀಸ್ ಸಿಬ್ಬಂದಿಗಳಿಗೆ ಗೌರವ ಸಲ್ಲಿಸಲಾಗುತ್ತದೆ. ಅಂದು ಪೊಲೀಸ್ ಬ್ಯಾಂಡ್ ಪ್ರದರ್ಶನ, ಪಥಸಂಚಲನ, ಓಟದ ಸ್ಪರ್ಧೆ, ರಕ್ತದಾನ ಶಿಬಿರ,ಪ್ರಬಂಧ ಸ್ಪರ್ಧೆ, ಚಿತ್ರಕಲೆ ಸ್ಪರ್ಧೆಗಳು, ವಿಡಿಯೋ ಚಲನಚಿತ್ರಗಳ ಪ್ರದರ್ಶನ, ಪೊಲೀಸ್ ಸಿಬ್ಬಂದಿಯ ತ್ಯಾಗ, ಶೌರ್ಯ ಮತ್ತು ಸೇವೆ ಮುಂತಾದ ವಿವಿಧ ಸ್ಮರಣಾರ್ಥ ಕಾರ್ಯಕ್ರಮಗಳನ್ನು ದೇಶಾದ್ಯಂತ ಆಯೋಜಿಸಲಾಗುತ್ತದೆ.

2018ರಲ್ಲಿ ಈ ದಿನದಂದು ಪ್ರಧಾನಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿ ರಾಷ್ಟ್ರೀಯ ಪೊಲೀಸ್ ಸ್ಮಾರಕವನ್ನು ದೇಶಕ್ಕೆ ಅರ್ಪಿಸಿದರು. ಈ ಸ್ಮಾರಕದ ಮೂರು ಪ್ರಮುಖ ಅಂಶಗಳಲ್ಲಿ ಇತಿಹಾಸದೂದಕ್ಕೂ ಭಾರತೀಯ ಪೋಲಿಸ್ ವ್ಯವಸ್ಥೆಯ ಬೆಳವಣಿಗೆಯನ್ನು ತೋರಿಸುವ ಪೋಲೀಸ್ ವಸ್ತುಸಂಗ್ರಹಾಲಯ, ಹುತಾತ್ಮ ಪೊಲೀಸರ ಹೆಸರನ್ನು ಪಟ್ಟಿ ಮಾಡುವ ಶೌರ್ಯದ ಗೋಡೆ ಮತ್ತು ಭಾಷಾ ದಾಳಿಯ ಸ್ಥಳದಿಂದ ಶಕ್ತಿ ಮತ್ತು ಸ್ಥಿತಿಸ್ಥಾಪಕತ್ವದ ಸಂಕೇತ ಹೊಂದಿದೆ.

ಸ್ಮಾರಕವು ಪೊಲೀಸ್ ಪಡೆಗಳಿಗೆ ರಾಷ್ಟ್ರೀಯ ಗುರುತು,ಹೆಮ್ಮೆ,ಉದ್ದೇಶದ ಏಕತೆ, ಸಾಮಾನ್ಯ ಇತಿಹಾಸ ಮತ್ತು ಹಣೆಬರಹವನ್ನು ನೀಡುತ್ತದೆ. ಜೊತೆಗೆ ಅವರ ಜೀವನದ ಹಂಗು ತೊರೆದು ರಾಷ್ಟ್ರೀಯವನ್ನು ರಕ್ಷಿಸಲು ಅವರ ಬದ್ಧತೆಯನ್ನು ಬಲಪಡಿಸುತ್ತದೆ.ಸ್ಮಾರಕವು ಕೇಂದ್ರ ಶಿಲ್ಪ "ವಾಲ್ ಆಫ್ ಶೌರ್ಯ "ಮತ್ತು ವಸ್ತು ಸಂಗ್ರಹಾಲಯವನ್ನು ಒಳಗೊಂಡಿದೆ. 30 ಅಡಿ ಎತ್ತರದ ಗ್ರಾನೈಟ್ ಏಕಶಿಲೆಯ ಸಮಾಧಿ ಪೊಲೀಸರ ನಿಸ್ವಾರ್ಥ ಸೇವೆಯನ್ನು ಪ್ರತಿನಿಧಿಸುತ್ತದೆ.

ಈ ಸಮಾಧಿಯು ಒಂದು ರೀತಿಯ ಮ್ಯೂಸಿಯಂ ಆಗಿದ್ದು, ಇಲ್ಲಿ ಪೊಲೀಸರ ಕುರಿತಾದ ಐತಿಹಾಸಿಕ ಸಂಗತಿಗಳನ್ನು ಪ್ರದರ್ಶಿಸಲಾಗುತ್ತದೆ. ಇದು ಪೊಲೀಸ್ ಸಿಬ್ಬಂದಿಗಳಿಗೆ ಮಾತ್ರವಲ್ಲದೇ ನಾಗರಿಕರಿಗೂ ಪೂಜ್ಯನೀಯವಾದ ಸ್ಥಳವಾಗಿದೆ. ಇದು ಸೋಮವಾರ ಒಂದು ದಿನವನ್ನು ಹೊರತುಪಡಿಸಿ ವಾರದ ಉಳಿತಲ್ಲ ದಿನ ಸಾರ್ವಜನಿಕರಿಗೋಸ್ಕರ ತೆರೆದಿರುತ್ತದೆ. ಮತ್ತು ಪ್ರತಿ ಶನಿವಾರ ಮತ್ತು ಭಾನುವಾರ ಸಂಜೆ ಸೂರ್ಯಾಸ್ತದ ಒಂದು ಗಂಟೆ ಮೊದಲು ಪೊಲೀಸ್ ಪಡೆಗಳು ವೈರಿಗಳನ್ನು ಹೆಮ್ಮೆಟ್ಟು ವಿಕೆಯ ಸಾಕ್ಷ್ಯಾಚಿತ್ರ ಸಮಾರಂಭವನ್ನು ಆಯೋಜಿಸಲಾಗುತ್ತದೆ.

ಪ್ರತಿ ವರ್ಷವೂ ಅಕ್ಟೋಬರ್ 21ನ್ನು ದೇಶಾದ್ಯಂತ ಪೊಲೀಸ್ ಸ್ಮರಣಾರ್ಥ ದಿನವೆಂದು ಆಚರಿಸಲಾಗುತ್ತದೆ. ಅಂದು ಕೇಂದ್ರ ಗ್ರಹ ಸಚಿವರು, ರಾಜ್ಯ ಖಾತೆ ಸಚಿವರು, ಸಂಸದರು, ಸಿ ಎ ಪಿ ಎಫ್ ನ ಮುಖ್ಯಸ್ಥರು ಮುಂತಾದವರು ಹುತಾತ್ಮ-ರಿಗೆ ಪುಷ್ಪಗುಚ್ಛಗಳನ್ನು ಹಾಕುವ ಮೂಲಕ ಗೌರವ ನಮನ ಸಲ್ಲಿಸುತ್ತಾರೆ. ನಂತರ 22 ರಿಂದ 30ರವರೆಗೆ ಸಿ ಎ ಪಿ ಎಫ್ ಸಿಬ್ಬಂದಿಗಳು ರಾಷ್ಟ್ರೀಯ ಪೊಲೀಸ್ ಸ್ಮಾರಕದ ಬಳಿ ಹುತಾತ್ಮರ ಕುಟುಂಬದ ಸದಸ್ಯರನ್ನು ಭೇಟಿಯಾಗುತ್ತಾರೆ. ಪ್ರತಿ ವರ್ಷವೂ ದೇಶಾದ್ಯಂತ ಅಕ್ಟೋಬರ್ 21ರಂದು ಕಷ್ಟಕರ ವಾತಾವರಣದಲ್ಲೂ ಗಣನೀಯವಾಗಿ ಅಪಾಯಕಾರಿ ಸಂದರ್ಭದಲ್ಲಿ ಕೆಲಸ ಮಾಡಿ ಹುತಾತ್ಮರಾದ ಪೊಲೀಸ್ ಪಡೆಗಳ ಶೌರ್ಯ, ನಿಸ್ವಾರ್ಥತೆಯನ್ನು ನೆನೆಯಲಾಗುತ್ತದೆ.

# ಬೆಳಕಿನ ಹಬ್ಬ ದೀಪಾವಳಿ



**ದೀಪಗಳ ಬೆಳಕಿನ ದೀಪಾವಳಿ ದೀಪಾವಳಿಯು ಭಾರತದ ಪ್ರಸಿದ್ಧ ಹಬ್ಬಗಳಲ್ಲಿ ಒಂದಾಗಿದೆ. ಹಿಂದೂ ಧರ್ಮದವರು ಆಚರಿಸುವ ಹಬ್ಬಗಳಲ್ಲಿ ಇದು ಒಂದಾಗಿದ್ದು, ಎಲ್ಲೆಡೆ ಹಬ್ಬದ ಸಡಗರ ತುಂಬಾ ಭರದಿಂದ ಮಾಡಲಾಗುತ್ತದೆ. ಹೊಸ ಬಟ್ಟೆ ತೊಟ್ಟು, ದೀಪ ಬೆಳಗಿ, ಸಿಹಿ ಸವಿದು ಈ ಹಬ್ಬವನ್ನು ಉಲ್ಲಾಸದಿಂದ ಆಚರಿಸಲಾಗುತ್ತದೆ. ಚಳಿಗಾಲದ ಆಗಮನದ ಸ್ವಾಗತ ಇದು ಎಂದರು ತಪ್ಪಾಗದು.**

## ದೀಪಾವಳಿ ಹಬ್ಬ ಆಚರಿಸುವ ರೀತಿ



ದೀಪಾವಳಿಯ ಆಚರಣೆಯ ಸುತ್ತಲಿನ ಎಲ್ಲಾ ವಿನೋದ, ಪಟಾಕಿಗಳ ಜೊತೆಗೆ ಇದು ಅಂತರ್ಗತವಾಗಿ ಆಚರಿಸಲಾಗುವ. ಹಬ್ಬವಾಗಿದೆ ದೀಪಾವಳಿ ಸಮಯದಲ್ಲಿ ಜನರು ಚಿನ್ನ ಮತ್ತು ಬೆಳ್ಳಿಯ ಪೀಠೋಪಕರಣಗಳು ಮತ್ತು ಮನೆಗೆ ಬೇಕಾದ ಪಾತ್ರೆಗಳನ್ನು ಕರಿದಿಸಿ, ಮನೆಯನ್ನು ಬಣ್ಣದ ಪುಡಿ, ಹಿಟ್ಟು ಮತ್ತು ಮರಳಿನಿಂದ ಮಾಡಿದ ರಂಗೋಲಿಗಳಿಂದ ಅಲಂಕಾರ ಮಾಡುವುದು ಸಾಮಾನ್ಯ ಅಭ್ಯಾಸವಾಗಿದೆ. ಪ್ರಸಿದ್ಧ ಸಂಸ್ಕೃತ ಕವಿ ರಾಜಶೇಖರನ 9ನೇ ಶತಮಾನದ ಕೃತಿ ಕಾವ್ಯಮೀಮಾಂಸೆಯಲ್ಲಿ ಮನೆಗಳನ್ನು ಸ್ವಚ್ಛಗೊಳಿಸುವ ಮತ್ತು ದೀಪಗಳಿಂದ ಅಲಂಕರಿಸುವ ಸಂಪ್ರದಾಯವನ್ನು ಉಲ್ಲೇಖಿಸಲಾಗಿದೆ. ಈ ರೀತಿ ಮಾಡುವುದು ಮಂಗಳಕರವೆಂದು ಪರಿಗಣಿಸಲಾಗಿದೆ.

## ಇಂದಿನ ದಿನಮಾನದಲ್ಲಿ ಲಕ್ಷಿಸಬೇಕಾದ ಅಂಶಗಳು


ದೀಪಾವಳಿಯ ಸಮಯದಲ್ಲಿ ದೀಪಗಳನ್ನು ಹಚ್ಚುವ ರೀತಿ ಮರೆಯಾಗುತ್ತಾ ಬಂದಿದೆ. ದೀಪಾವಳಿಯಲ್ಲಿ ದೀಪವನ್ನು ಬಲಿಯನ್ನು ಕಳಿಸುವಾಗ ಹಚ್ಚುವಾಗ ಮೊದಲು ದೇವರ ಪೀಠದ ಮುಂದೆ, ನಂತರ ಅಡಿಕೆ ಮನೆಯಲ್ಲಿ ಹಾಗೂ ಅಂಗಳದಲ್ಲಿ ಇರೋ ತುಳಸಿ ಮುಂದೆ ತುಪ್ಪದ ದೀಪ ಹಚ್ಚಿ, ನಂತರ ಉಳಿದ ಸ್ಥಾನಗಳಲ್ಲಿ ತುಪ್ಪದ ಇಲ್ಲವಾದಲ್ಲಿ ದೀಪದ ಎಣ್ಣೆಯ ಮೂಲಕ ಬೆಳಗಬೇಕು. ಹೀಗೆ ಬೆಳಗುವಾಗ ಒಂದು ದೀಪದಿಂದ ಇನ್ನೊಂದು ದೀಪಗಳನ್ನು ಹಚ್ಚಬಾರದು. ಬದಲಿಗೆ ಒಂದಾದ ನಂತರ ಒಂದನ್ನು ಹಚ್ಚಬೇಕು. ಹಚ್ಚಿದ ದೀಪಗಳು ಬೆಸ ಸಂಖ್ಯೆಯಲ್ಲಿ ಇದ್ದು. ದೀಪ ಹಚ್ಚಾದ ನಂತರ ಕೈಯನ್ನು ತೊಳೆದುಕೊಳ್ಳಬೇಕು. ಆಗ ಲಕ್ಷ್ಮಿ ದೇವಿ ಬಂದು ನಮ್ಮ ಮನೆಯಲ್ಲಿ ನೆಲೆಸುವಳೆಂಬ ಪ್ರತೀತಿ ಇದೆ. ಆದರೆ ಇಂದು ಬರ ಬರುತ್ತಾ ಆಚರಣೆಗಳು ಮರೆಯಾಗುತ್ತಿವೆ.ಐದು ದಿನದ ಹಬ್ಬ ಮೂರು ದಿನಕ್ಕೆ ಇಳಿದಿದೆ. ಸಾಮಾಜಿಕ ಮಾಧ್ಯಮದಲ್ಲಿ ಫೋಟೋ ವಿಡಿಯೋ ಹಾಕುವ ಬರದಲ್ಲಿ ಮಣ್ಣಿನ ದೀಪವನ್ನು ಬೆಳಗುವ ರೀತಿಯನ್ನೇ ಮರೆತು ಮರೆತು, ಎಲೆಕ್ಟ್ರಾನಿಕ್ ದಿಪಗಳಿಂದ ಮನೆಯನ್ನು ಅಲಂಕರಿಸುತ್ತಿದ್ದಾರೆ. ಇನ್ನೂ ಹಬ್ಬದ ಪ್ರಾರಂಭದಿಂದಲೂ ಅಂದರೆ ಶ್ರೀರಾಮ ಅಯೋಧ್ಯೆಗೆ ಹಿಂತಿರುಗಿದ ದಿನದ ಆಚರಣೆಯ ಪ್ರಾರಂಭದಿಂದಲೂ ಸಂಭ್ರಮದ ಆಚರಣೆಗಾಗಿ ಪಟಾಕಿ ಸಿಡಿಸುವ ಆಚರಣೆ ಇತ್ತು. ಆದರೆ ಹಿಂದೂ ಹಬ್ಬಗಳ ಸಮಯದಲ್ಲಿ ಎಚ್ಚೆತ್ತುಕೊಳ್ಳುವ ಪ್ರಜ್ಞಾವಂತರ ಪ್ರಕಾರ, ಹಬ್ಬದ ಕೆಲ ದಿನ ಮಾತ್ರ ಹೆಚ್ಚುವ ಪಟಾಕಿಯಿಂದ ಮಾಲಿನ್ಯ ಉಂಟಾಗುತ್ತಿದ್ದು ಇದು ಭವಿಷ್ಯದ ಯುವಜನತೆಗೆ ಒಳ್ಳೆಯ ವಾತಾವರಣ ಇರದಂತೆ ಮಾಡುತ್ತದೆ ಎಂದು ಹೇಳುತ್ತಿದ್ದಾರೆ. ಪಟಾಕಿ ಸಿಡಿಸುವುದರಿಂದ ವಾಯು ಮಾಲಿನ್ಯವಾಗುತ್ತದೆ ಎಂಬುದು ನಿಜ. ಅದಕ್ಕಾಗಿ ಜಿಯೋ ಲೈಟ್ ಮತ್ತು ಐರನ್ ಆಕ್ಸೈಡ ನಂತಹ ಬಹು ಕಾರ್ಯ ಅಡಿಕ್ಟಿವ್ಸಗಳ ಬಳಕೆ ಮಾಡಿ ಮಾಡಲಾಗಿರುವ ಹಸಿರು ಪಟಾಕಿಗಳನ್ನು ದಿನ ಬೆಳಗಾದರೆ ಧೂಮಪಾನ ಮಾಡುವ ಯುವಜನತೆಯ ಉಳಿವಿಗಾಗಿ ಬಳಕೆಗೆ ತರಲಾಗಿದೆ. ಇದು ಕಡಿಮೆ ಪ್ರಮಾಣದ ಮಾಲಿನ್ಯ ಉಂಟು ಮಾಡುವುದರಿಂದ ಇದನ್ನು ಹಸಿರು ಪಟಾಕಿ ಎಂದು ಕರೆಯಲಾಗುತ್ತದೆ.ಹೀಗೆ ಹಿಂದೂಗಳ ಆಚರಣೆಗಳ ಮೇಲೆ ಒಂದಾದ ಮೇಲೊಂದರಂತೆ ಕತ್ತರಿ ಹಾಕಲಾಗಿದೆ.





## ದೀಪಾವಳಿಯ ಹಿನ್ನೆಲೆ ಕಥೆಗಳು

ದೀಪಾವಳಿ ಆಚರಣೆಯ ಕುರಿತು ಅನೇಕ ಹಿನ್ನಲೆ ಕಥೆಗಳಿದ್ದರೂ ಅತ್ಯಂತ ಪ್ರಸಿದ್ಧ ಕಥೆ ಎಂದರೆ, ಶ್ರೀರಾಮಚಂದ್ರನು ರಾವಣನನ್ನು ಸಂಹರಿಸಿ, ಸೀತೆಯನ್ನು ಆತನ ಬಂಧನದಿಂದ ಮುಕ್ತಗೊಳಿಸಿ, 14 ವರ್ಷದ ವನವಾಸದ ನಂತರ ಅಯೋಧ್ಯೆಗೆ ಹಿಂತಿರುಗಿ ಬರುತ್ತಾನೆ. ಆಗ ಅಯೋಧ್ಯ ಜನರು ದೀಪಗಳನ್ನು ಬೆಳಗಿಸಿ ಪಟಾಕಿ ಸಿಡಿಸಿ ಸಂಭ್ರಮದಿಂದ ರಾಮ ಸೀತೆಯರನ್ನು ಬರಮಾಡಿಕೊಂಡ ದಿನವನ್ನು ದೀಪಾವಳಿ ಎಂದು ಆಚರಿಸಲಾಗುತ್ತದೆ ಎಂದು ಪುರಾಣ ಕಥೆಗಳು ಹೇಳುತ್ತವೆ. ಅಮವಾಸ್ಯೆಯ ಹಿಂದಿನ ದಿನ ಶ್ರೀ ಕೃಷ್ಣನು ಸತ್ಯಭಾಮೆಯ ಜೊತೆಗೂಡಿ ನರಕಾಸುರನನ್ನು ಸಂಹಾರ ಮಾಡಿ ಲೋಕವನ್ನು ಕೇಡಿನಿಂದ ರಕ್ಷಿಸಿ ನೆಮ್ಮದಿ ನೀಡಿದ ಭಾಗವಾಗಿ ನರಕ ಚತುರ್ಥಿ ಎಂದು ಆಚರಿಸಲಾಗುತ್ತದೆ. ಆ ದಿನ ಬೆಳಿಗ್ಗೆ ಸೂರ್ಯೋದಯಕ್ಕೂ ಮುನ್ನ ಎದ್ದು ಎಣ್ಣೆ ಸ್ನಾನಮಾಡಿ ದೀಪ ಬೆಳಗಿಸುವ ಮೂಲಕ ಕೆಟ್ಟ ಶಕ್ತಿಗಳಿಂದ ಮುಕ್ತಿ ಪಡೆಯಬಹುದು ಎಂಬ ನಂಬಿಕೆ ಇದೆ. ಅಲ್ಲದೆ ಅಂದು ಉಪಹಾರದಲ್ಲಿ ಉದ್ದಿನ ದೊಸೆಯನ್ನು ಸೇವಿಸಲಾಗುತ್ತದೆ. ಕಹಿಯನು ಸೇವಿಸಿ ಮುಂಬರುವ ಚಳಿಗಾಲಕ್ಕೆ ದೇಹವನ್ನು ಸಜ್ಜುಗೊಳಿಸಲಾಗುತ್ತದೆ. ದೀಪಾವಳಿಯ ಮಾರನೇ ದಿನ ಲಕ್ಷ್ಮೀ ಪೂಜೆ. ಆ ದಿನ ಲಕ್ಷ್ಮೀ ದೇವಿ ಹಾಗೂ ಗಣೇಶನನ್ನು ಪೂಜಿಸಲಾಗುತ್ತದೆ. ಅಂದು ಸಂಪತ್ತನ್ನು ಪಡೆಯಲು ಲಕ್ಷ್ಮೀ ।ಸಹಕರಿಸುವ ಪ್ರತ್ಯಕ್ಷ ಮಾಧ್ಯಮಗಳಾದ ಆಯುಧ, ವಾಹನ,ಪುಸ್ತಕಗಳನ್ನು ಪೂಜಿಸಿ ದೇವಿಗೆ ಕೃತಜ್ಞತೆ ಸಲ್ಲಿಸಲಾಗುತ್ತದೆ. ನಂತರ ಮನೆಗಳನ್ನು ದೀಪಗಳಿಂದ ಅಲಂಕರಿಸಿ ವಿವಿಧ ಸಿಹಿ ತಿಂಡಿಗಳನ್ನು ತಯಾರಿಸಿ ಹಂಚಲಾಗುತ್ತದೆ. ಅಮಾವಾಸ್ಯೆಯ ಮಾರನೇ ದಿನ ಕೆಲವೆಡೆ ಗೋವರ್ಧನವನ್ನು ಪೂಜಿಸಲಾಗುತ್ತದೆ. ಕರ್ನಾಟಕದಲ್ಲಿ ಬಲಿ-ವಾಮನರ ಕಥೆ ಮತ್ತು ಬಲಿಯ ತ್ಯಾಗವನ್ನು ನೆನೆದು ಬಲಿಪಾಡ್ಯಮಿ ಎಂದು ಆಚರಿಸಲಾಗುತ್ತದೆ. ನಾಲ್ಕನೇಯ ದಿನ ಸಹೋದರರ ಸಹೋದರಿಯರ ಹಬ್ಬ. ಸಹೋದರಿಯರು ತಮ್ಮ ಸಹೋದರನ ಯೋಗ ಕ್ಷೇಮಕ್ಕಾಗಿ ಪ್ರಾರ್ಥನೆ ಸಲ್ಲಿಸಿ ಆರತಿ ಮಾಡಿ ತಿಲಕವಿಟ್ಟು ಸಿಹಿ ಹಂಚುತ್ತಾರೆ. ದೀಪಾವಳಿ ಕೇವಲ ಭವ್ಯ ಆಚರಣೆಯಾಗಿಲ್ಲದೆ ಒಂದೊಂದು ದಿನ ಒಂದೊಂದು ಮಹತ್ವವನ್ನು ಹೊಂದಿದ್ದು ತ್ಯಾಗ ಮತ್ತು ವಿಜಯದ ಸಂಕೇತವನ್ನಾಗಿ ಆಚರಿಸಲಾಗುತ್ತದೆ.



## ದೀಪಾವಳಿ ಸತ್ಪ್ರೇರಣೆ ಮೂಡಿಸಲಿ

ದೀಪಾವಳಿ ಧರ್ಮದ ಜಯವನ್ನು ಪ್ರತಿಪಾದಿಸುವ ಮಹತ್ವದ ಹಬ್ಬವಾಗಿದೆ. ಈ ಹಬ್ಬವು ಕೇವಲ ಧಾರ್ಮಿಕ ಆಚರಣೆ ಮಾತ್ರವಲ್ಲ, ಅದು ಮಾನವ ಜೀವನದಲ್ಲಿ ಶಾಂತಿ, ಪ್ರೀತಿ ಮತ್ತು ಸಹಬಾಳ್ವೆಯ ಸಂದೇಶ ನೀಡುತ್ತದೆ. ದೀಪಾವಳಿಯ ಬೆಳಕು ಕೇವಲ ಮನೆಗಳಲ್ಲ, ಹೃದಯಗಳಲ್ಲಿಯೂ ಬೆಳಗಬೇಕು ಎಂಬುದು ಇದರ ನಿಜವಾದ ಅರ್ಥ. ಈ ಹಬ್ಬ ನಮ್ಮಲ್ಲಿ ಹೊಸ ಆಶಾಭಾವನೆ, ಒಗ್ಗಟ್ಟು ಮತ್ತು ಸತ್ಪ್ರೇರಣೆಯನ್ನು ಮೂಡಿಸುತ್ತದೆ.



## ಮನುಕುಲಕ್ಕೆ ಸಂಜೀವಿನಿ ತುಳಸಿ

ತುಳಸಿ ಅದರ ಪವಿತ್ರತೆಗೆ ಹೆಸರುವಾಸಿ. ಹಿಂದೂ ಧರ್ಮದಲ್ಲಿ ತುಳಸಿಗಿಡವನ್ನು ಪೂಜಿಸಲಾಗುತ್ತದೆ. ಇದು ಸುಖ ಮತ್ತು ಕಲ್ಯಾಣದ ಪ್ರತೀಕ ಎಂದು ನಂಬಲಾಗಿದೆ. ಇದು ಪೌರಾಣಿಕವಾಗಿ ಎಷ್ಟು ದೊಡ್ಡ ಇತಿಹಾಸವನ್ನು ಹೊಂದಿದೆಯೋ ಅದಕ್ಕೂ ಮಿಗಿಲಾದ ಔಷಧಿ ಗುಣಗಳನ್ನು ಒಳಗೊಂಡಿದೆ. ತುಳಸಿ ಗಿಡ ಪುಟ್ಟ ಸಸ್ಯ ಜಾತಿಗೆ ಸೇ-ರಿದ ಎಳೆಯದಾದ, ಬಹಳ ಕಡಿಮೆ ಎತ್ತರದಲ್ಲಿ ಬೆಳೆಯುವ ಸಸ್ಯ. ಸಸ್ಯದ ಜಾತಿ ಹಾಗೂ ತಳಿಯನ್ನು ಅವಲಂಬಿಸಿ ಎಲೆಗಳು ಸ್ವಲ್ಪ ಮಟ್ಟಿಗೆ ವಾಯುಹಕ ಔಷಧಿಗೆ ಉಪಯೋಗಿಸುವ ಸೋಂಪು ಬೀಜದ ಮಾದರಿಯ ರುಚಿಯನ್ನು ಹೊಂದಿದೆ. ಜೊತೆಗೆ ಗಾಢ ತೀಕ್ಷ್ಣವಾದ ಸಾಮಾನ್ಯವಾಗಿ ಮೋಹಕ ಪರಿಮಳವನ್ನು ಹೊಂದಿದೆ.

ತುಳಸಿ ಮೂಲತಃ ಇರಾನ್, ಭಾರತ ಹಾಗೂ ಏಷ್ಯಾದ ಉಷ್ಣವಲಯದ ಪ್ರದೇಶಗಳ ಸಸ್ಯವಾಗಿದೆ. ಇದು ಈ ಪ್ರದೇಶಗಳಲ್ಲಿ 5000ಕ್ಕೂ ಹೆಚ್ಚು ಕಾಲಗಳಿಂದ ಬೆಳೆಯುತ್ತಾ ಬಂದಿದೆ. ಮುಖ್ಯವಾಗಿ ಇದನ್ನು ಪ್ರತಿಯೊಬ್ಬ ಭಾರತೀಯ ಹಿಂದೂ ಸಂಪ್ರದಾಯ ಅನುಯಾಯಕರ ಮನೆಯಂಗಳದಲ್ಲಿ ಕಂಗೊಳಿಸುತ್ತಿರುವುದನ್ನು ಕಾಣಬಹುದು. ಹಿಂದೂ ಧರ್ಮ ದಲ್ಲಿ ತುಳಸಿಗೆ ಹೆಚ್ಚು ಮಹತ್ವ ಇದೆ. ಇಲ್ಲಿ ಪವಿತ್ರ ತೀರ್ಥಗಳನ್ನು ಸಿದ್ದಪಡಿಸುವಾಗ ತುಳಸಿಯನ್ನು ಬಳಸಲಾಗುತ್ತದೆ. ಅಲ್ಲದೇ ತುಳಸಿಯ ಕುಂಡವನ್ನು ನಾವು ಸಾಮಾನ್ಯವಾಗಿ ಚರ್ಚಿನ ವಿವೇಧನ ಪೀಠದ ಕೆಳಗಡೆ ಇಟ್ಟಿರುವುದನ್ನು ನೋಡಬಹುದು. ಅಂದರೆ ಹಿಂದೂ ಧರ್ಮದಲ್ಲಿ ಮಾತ್ರವಲ್ಲದೆ ಇತರೆ ಧರ್ಮದಲ್ಲೂ ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ. ಭಾರತದಲ್ಲಿ ಮರಣದ ಹಂತದಲ್ಲಿರುವವರ ಬಾಯಿಯಲ್ಲಿ ತುಳಸಿಯನ್ನು ಹಾಕಿದರೆ ಅವರು ದೇವರ ಪಾದವನ್ನು ಸೇರುವರೆಂಬ ನಂಬಿಕೆ ಇದೆ. ಅದೇ ರೀತಿ ಜೋಯಿಷ ಜನಪದ ಕಥೆಗಳು ಉಪವಾಸ ಇರುವಾಗ ತುಳಸಿಯನ್ನು ಸೇವಿಸಿದರೆ ದೇಹಕ್ಕೆ ಬಲ ನೀಡುತ್ತದೆ ಎಂದು ತಿಳಿಸಿವೆ. ತುಳಸಿ ಎಲೆಗಳ ಜೊತೆ ತುಳಸಿಯ ಪ್ರತಿಯೊಂದು ಭಾಗವನ್ನು ಔಷಧಿ ವಸ್ತುವನ್ನಾಗಿ ಬಳಸಲಾಗುತ್ತದೆ. ಅದರಲ್ಲಿ ತುಳಸಿ ಬೇರುಗಳು ಅತ್ಯಂತ ಪ್ರಮುಖವಾಗಿವೆ. ತುಳಸಿಯ ಸೇವನೆಯಿಂದ ಮಾತ್ರವೇ ನಮಗರಿವಿಲ್ಲದಂತೆ ನಮ್ಮ ದೇಹದಲ್ಲಿನ ಅನೇಕ ಕಾಯಿಲೆಗಳು ವಾಸಿಯಾಗುತ್ತದೆ. ಉದಾಹರಣೆಗೆ ನಿಶಕ್ತಿ, ನೆಗಡಿ, ಕೆಮ್ಮುಮುಂತಾದ ರೋಗಗಳು ನಿವಾರಣೆಯಾಗುತ್ತವೆ.

ಎಲೆಗಳ ರೀತಿಯಲ್ಲಿ ತುಳಸಿ ಬೇರುಗಳನ್ನು ಅನೇಕ ಸಮಸ್ಯೆಗಳ ನಿವಾರಣೆಗೆಂದು ಬಳಸಲಾಗುತ್ತದೆ. ಶರೀರದ ತಾಪಮಾನವನ್ನು ಕಡಿಮೆ ಮಾಡಲು ತುಳಸಿ ಎಲೆಗಳನ್ನು ಬಳಸಲಾಗುತ್ತದೆ. ಆಯುರ್ವೇದದಲ್ಲಿ ತುಳಸಿ ಬೇರುಗಳನ್ನು ಜ್ವರ ಕಡಿಮೆ ಮಾಡಲು ಬಳಸಲಾಗುತ್ತದೆ. ಜ್ವರ ಬಂದಾಗ ಒಂದು ಕಪ್ ನೀರಿನಲ್ಲಿ ಸುಮಾರು 20 ಗ್ರಾಂ ತುಳಸಿ ಬೇರು ಮತ್ತು 10 ಕಾಳುಮೆಣಸುಗಳನ್ನು ಹಾಕಿ ನೀರು ಅರ್ಧವಾಗುವ ತನಕ ಕುದಿಸಿ ಕುಡಿದರೆ ಜ್ವರ ಕಡಿಮೆಯಾಗಿತ್ತದೆ. ತುಳಸಿ ಸಾಮಾನ್ಯ ಎಲ್ಲಾ ರೀತಿಯ ಕಾಯಿಲೆಗೆ ಮದ್ದಾಗಿದೆ. ಇದು ಕಲೆ, ಚರ್ಮ ಸಂಭಂದಿ ರೋಗ, ಗಂಟು ನೋವು ಇತ್ಯಾದಿಗಳನ್ನು ಕಡಿಮೆ ಮಾಡುತ್ತದೆ. ಒಟ್ಟಿನಲ್ಲಿ ತುಳಸಿ ಸ್ವಾಸ್ತ್ಯ ಸಂಭಂದ ಅನೇಕ ಕಾಯಿಲೆಗಳಿಂದ ನಮ್ಮನ್ನು ದೂರ ಇಡುತ್ತದೆ.

# ಅಷ್ಫಾಕ್ ಉಲ್ಲಾ ಖಾನ್



ಪ್ರಭು ವಡ್ಡರ್

ಭಾರತೀಯ ಸ್ವಾತಂತ್ರ್ಯ ಹೋರಾಟದ ಅಮರ ಶಹೀದರಲ್ಲಿ ಒಬ್ಬರು. ಅವರು 1900ರ ಅಕ್ಟೋಬರ್ 22ರಂದು ಉತ್ತರ ಪ್ರದೇಶದ ಶಹಜಹಾನ್ಪುರದಲ್ಲಿ ಜನಿಸಿದರು. ಬಾಲ್ಯದಿಂದಲೇ ದೇಶಭಕ್ತಿಯ ಭಾವನೆ ಅವರ ಮನಸ್ಸಿನಲ್ಲಿ ಆಳವಾಗಿ ನೆಲೆಯೂರಿತ್ತು. ಅವರ ತಂದೆ ಶಫೀಉಲ್ಲಾ ಖಾನ್ ಹಾಗೂ ತಾಯಿ ಮಜ್ಹೂರ್ ಉನ್ನಿಸ್ಸಾ ಬಾನೋ ದೇಶಪ್ರೇಮದ ಸಂಸ್ಕಾರ ನೀಡಿದರು. ಅವರು ಶಿಕ್ಷಣ ಪಡೆದಾಗಲೇ ಬ್ರಿಟಿಷರ ಅನ್ಯಾಯ, ದಮನ, ಶೋಷಣೆ ಇವರಿಂದ ದೇಶವನ್ನು ಮುಕ್ತಗೊಳಿಸುವ ಸಂಕಲ್ಪ ಮಾಡಿದರು. ಆರಂಭದಲ್ಲಿ ಗಾಂಧೀಜಿ ಪ್ರಾರಂಭಿಸಿದ ಅಹಿಂಸಾ ಚಳುವಳಿಯು ಅವರಿಗೆ ಪ್ರೇರಣೆಯಾಗಿದ್ದರೂ, ನಂತರ ಬ್ರಿಟಿಷರು ಮಾಡಿದ ಅಮಾನವೀಯ ಕ್ರಿಯೆಗಳು ಮತ್ತು ಜನರ ಮೇಲಿನ ಹಿಂಸೆ ಕಂಡು ಅವರು ಕ್ರಾಂತಿಕಾರಿ ಮಾರ್ಗವನ್ನು ಆಯ್ದುಕೊಂಡರು. ಅವರು ಚಂದ್ರಶೇಖರ ಆಜಾದ್, ರಾಮಪ್ರಸಾದ್ ಬಿಸ್ಮಿಲ್, ರಾಜೇಂದ್ರಲಾಲ್ ಲಹರಿ, ರೋಶನ್ ಸಿಂಗ್ ಮುಂತಾದ ಧೀರ ಯೋಧರ ಜೊತೆ ಸೇರಿ ಹಿಂದೂಸ್ತಾನ್ ರಿಪಬ್ಲಿಕನ್ ಅಸೋಸಿಯೇಶನ್ ಸಂಘಟನೆಯು ಬಲಪಡಿಸಲು ಶ್ರಮಿಸಿದರು. ಈ ಸಂಘಟನೆಯ ಉದ್ದೇಶ ಭಾರತವನ್ನು ಬ್ರಿಟಿಷರ ಆಳ್ವಿಕೆಯಿಂದ ಮುಕ್ತಗೊಳಿಸುವುದಾಗಿತ್ತು. ಅವರು ಧರ್ಮ, ಜಾತಿ, ಭಾಷೆ ಇವುಗಳ ಪಾರವಾಗಿ ದೇಶಕ್ಕಾಗಿ ಬದುಕಿದ ವ್ಯಕ್ತಿ.

1925ರ ಆಗಸ್ಟ್ 9ರಂದು ಲಕ್ನೋ ಸಮೀಪದ ಕಾಕೋರಿ ರೈಲಿನಲ್ಲಿ ನಡೆದ ದರೋಡೆ ಘಟನೆಯಲ್ಲಿ ಅವರು ಪ್ರಮುಖ ಪಾತ್ರವಹಿಸಿದರು. ಬ್ರಿಟಿಷರ ಖಜಾನೆಯ ಹಣವನ್ನು ಕದ್ದುಕೊಂಡು ಅದನ್ನು ಸ್ವಾತಂತ್ರ್ಯ ಹೋರಾಟಕ್ಕೆ ಬಳಸುವ ಉದ್ದೇಶ ಅವರದ್ದಾಗಿತ್ತು. ಈ ಘಟನೆಯು ಬ್ರಿಟಿಷರ ಆಡಳಿತವನ್ನು ನಡುಗಿಸಿತು. ಆದರೆ ನಂತರ ಅವರ ಸಂಘಟನೆಯ ಅನೇಕ ಸದಸ್ಯರನ್ನು ಬಂಧಿಸಲಾಯಿತು. ಬಂಧನದ ನಂತರವೂ ಅವರು ತಮ್ಮ ಧೈರ್ಯ ಕಳೆದುಕೊಳ್ಳಲಿಲ್ಲ. ವಿಚಾರಣೆಯ ಸಮಯದಲ್ಲಿ ಅವರು ತಮ್ಮ ದೇಶದ ಪರವಾಗಿ ನಿಂತು, ತಮ್ಮ ನಂಬಿಕೆಯಿಂದ ಹಿಂದೆ ಸರಿಯಲಿಲ್ಲ. ನ್ಯಾಯಾಲಯದಲ್ಲಿ ಅವರು ಹೇಳಿದರು "ನಾನು ಮಾಡಿದದ್ದೆಲ್ಲಾ ನನ್ನ ದೇಶಕ್ಕಾಗಿ. ನನ್ನ ದೇಶ ಮುಕ್ತವಾಗಬೇಕು ಎಂಬುದು ನನ್ನ ಕನಸು." ಬ್ರಿಟಿಷರು ಅವರಿಗೆ ಮರಣದಂಡನೆ ವಿಧಿಸಿದರೂ, ಅವರು ಅದನ್ನು ತ್ಯಾಗದ ಗೌರವವೆಂದು ಸ್ವೀಕರಿಸಿದರು.


1927ರ ಡಿಸೆಂಬರ್ 19ರಂದು ಫೈಜಾಬಾದ್ ಜೈಲಿನಲ್ಲಿ ಅವರನ್ನು ಫಾಸಿಗೆ ಹಾಕಲಾಯಿತು. ತಮ್ಮ ಅಂತಿಮ ಕ್ಷಣಗಳಲ್ಲಿ ಅವರು ಕುರ್‌ಆನ್ ಪಾಠ ಮಾಡುತ್ತಾ "ಭಾರತ ಮಾತಾ ಕಿ ಜಯ" ಎಂದು ಘೋಷಿಸಿದರು. ಅವರ ಧೈರ್ಯ, ತ್ಯಾಗ, ನಂಬಿಕೆ ಇವೆಲ್ಲವೂ ಕ್ರಾಂತಿಯ ಹೊಸ ಜ್ವಾಲೆಯನ್ನು ಹೊತ್ತಿತು. ರಾಮಪ್ರಸಾದ್ ಬಿಸ್ಮಿಲ್ ಅವರೊಂದಿಗೆ ಅವರ ಸ್ನೇಹ ಹಿಂದೂ–ಮುಸ್ಲಿಂ ಏಕತೆಯ ಪ್ರತೀಕವಾಗಿ ಉಳಿಯಿತು. ಇಬ್ಬರೂ ವಿಭಿನ್ನ ಧರ್ಮದವರಾದರೂ, ಅವರ ಹೃದಯಗಳು ಒಂದೇ ಗುರಿಗಾಗಿ ಬಡಿತಗೊಂಡವು ಸ್ವತಂತ್ರ ಭಾರತಕ್ಕಾಗಿ ಈ ಸ್ನೇಹವು ಧರ್ಮದ ಮೇರೆಗಳು ದೇಶಭಕ್ತಿಯ ಮುಂದೆ ಅಪ್ರಸ್ತುತವೆಂದು ತೋರಿಸಿತು.

ಅವರು ಕೇವಲ ಕ್ರಾಂತಿಕಾರಿಯಲ್ಲ, ಮಾನವೀಯತೆಯ ಪ್ರತೀಕವೂ ಆಗಿದ್ದರು. ಅವರು ಭಾರತದ ಸಾಂಸ್ಕೃತಿಕ ಏಕತೆಯನ್ನು ಜೀವಂತವಾಗಿ ಉಳಿಸಿದರು. ತಮ್ಮ ಮರಣದ ಮೊದಲು ಅವರು ಹೇಳಿದರು – "ನಾನು ಈ ದೇಶದ ಮಣ್ಣಿನಲ್ಲಿ ಹುಟ್ಟಿದ್ದೇನೆ, ಇದೇ ಮಣ್ಣಿನಲ್ಲಿ ಸಾಯುತ್ತಿದ್ದೇನೆ, ಆದರೆ ನನ್ನ ಆತ್ಮ ಈ ಮಣ್ಣನ್ನು ಸ್ವತಂತ್ರಗೊಳಿಸದೆ ಶಾಂತಿಯಾಗುವುದಿಲ್ಲ." ಅವರ ಈ ಮಾತುಗಳು ಇಂದಿಗೂ ಪ್ರತಿಯೊಬ್ಬ ಭಾರತೀಯನ ಮನಸ್ಸಿನಲ್ಲಿ ಪ್ರತಿಧ್ವನಿಸುತ್ತಿವೆ.

ಅವರ ತ್ಯಾಗದಿಂದಾಗಿ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಹೊಸ ಚೈತನ್ಯವೊಂದು ಉಂಟಾಯಿತು. ಭಗತ್ ಸಿಂಗ್, ಸುಖದೇವ್, ರಾಜಗುರು ಮುಂತಾದ ಕ್ರಾಂತಿಕಾರರು ಅವರಿಂದ ಪ್ರೇರಣೆಯನ್ನು ಪಡೆದರು. ಭಾರತದ ಸ್ವಾತಂತ್ರ್ಯ ಇತಿಹಾಸದಲ್ಲಿ ಅಷ್ಫಾಕ್ ಉಲ್ಲಾ ಖಾನ್ ಅವರ ಸ್ಥಾನ ಅನನ್ಯವಾಗಿದೆ. ಅವರು ನಿಜವಾದ ಅರ್ಥದಲ್ಲಿ "ಧರ್ಮಾತೀತ ದೇಶಭಕ್ತ" ಹಾಗೂ "ಅಮರ ಶಹೀದ" ಎಂದು ಕರೆಯಲ್ಪಡುತ್ತಾರೆ. ಇಂದಿನ ಯುವಜನರು ಅವರ ಬದುಕಿನಿಂದ ದೇಶಭಕ್ತಿ, ನಿಸ್ವಾರ್ಥತೆ ಮತ್ತು ಸಹಕಾರದ ಪಾಠವನ್ನು ಕಲಿಯಬೇಕು. ಅವರ ಹೆಸರು ಎಂದಿಗೂ ಭಾರತೀಯ ಇತಿಹಾಸದಲ್ಲಿ ಬೆಳಗುತ್ತಿರುವ ನಕ್ಷತ್ರವಾಗಿ ಉಳಿಯುತ್ತದೆ.

# ಆತ್ಮ ನಿರ್ಭರ ಭಾರತಕ್ಕೆ ದಾರಿ ತೋರಿದ ಸ್ವದೇಶೀ ತಂತ್ರಜ್ಞಾನ

ಕಾರ್ತಿಕ್ ಹಳಿಜೋಳ




1900 ರ ದಶಕದಲ್ಲಿ ನಡೆದಂತಹ ಸ್ವದೇಶಿ ಚಳುವಳಿ ಬಗ್ಗೆ ನಮಗೆಲ್ಲ ತಿಳಿದಿದೆ. ಅದರ ಮೂಲ ಉದ್ದೇಶವೇ ಪರಕೀಯರಿಂದ ತಯಾರಿಸಲಾದ ಸಿದ್ಧ ವಸ್ತುಗಳ ಪರ್ಯಾಯವಾಗಿ ಸ್ವದೇಶಿ ನಿರ್ಮಿತ ವಸ್ತುಗಳನ್ನು ಬಳಕೆ ಮಾಡಬೇಕು ಎಂದು.

ಅದೇ ರೀತಿ ಇಂದಿನ ಡಿಜಿಟಲ್ ಯುಗದಲ್ಲಿ ಭಾರತೀಯ ತಂತ್ರಜ್ಞಾನದ ಪಥ ಬದಲಾಗಿದೆ. ದೇಶಿ ತಂತ್ರಜ್ಞಾನದ ಬಳಕೆಗೆ ಹೆಚ್ಚು ಬೇಡಿಕೆ ಹಾಗೂ ಪ್ರೋತ್ಸಾಹ ದೊರೆಯುತ್ತಿದೆ. ಇಂದು ಗೂಗಲ್, ಮೈಕ್ರೊಸಫ್ಟ್, ವಾಟ್ಸಪ್, ಗೂಗಲ್ ಮ್ಯಾಪ್, ಟ್ವಿಟರ್ ಗಳಂತಹ ವಿದೇಶಿ ಆ್ಯಪ್‌ಗಳಿಗೆ ಟಕ್ಕರ್ ಕೊಡಲು ಮುಂದಾಗಿವೆ. ಆದಾಗ್ಯೂ ಸಹ ದೈತ್ಯ ವಿದೇಶಿ ಕಂಪನಿಗಳು ಇಂದು ಭಾರತದಲ್ಲಿ ಬಲವಾಗಿ ಬೇರೂರಿವೆ. 2024ರಲ್ಲಿ ಟ್ವಿಟರ್‌ಗೆ ಪರ್ಯಾಯವಾಗಿ koo ಎಂಬ ಮೈಕ್ರೋ ಬ್ಲಾಗಿಂಗ್ ಆ್ಯಪ್ ಲಾಂಚ್ ಆಗಿತ್ತು. ಆದರೆ ಕೆಲವು ಆರ್ಥಿಕ ಸಮಸ್ಯೆ, ಹಾಗೂ ದುರ್ಬಲವಾದ ಒಪ್ಪಂದ ಸಾಮರ್ಥ್ಯದಿಂದ ಇದನ್ನು ಕೈಬಿಡಲಾಯಿತು.

ಆದಾಗ್ಯೂ ಈ ರೀತಿಯ ಸ್ಟಾರ್ಟ್‌ಆಫ್ ಗಳು ದೇಶೀಯವಾಗಿಯೇ ತಯಾರಾಗಿ ತೀವ್ರ ಪೈಪೋಟಿಯನ್ನು ನೀಡುತ್ತಿವೆ. AIನ ಬಳಕೆ, ಮ್ಯಾಪಿಂಗ್, ಮನೋರಂಜನೆ, ಚಾಟಿಂಗ್, ಫಿನ್ ಟೆಕ್ ಸಂವಹನಗಳು ವಿದೇಶಿ ಟೆಕ್‌ಗೆ ಪರ್ಯಾಯವಾಗಿವೆ. ಉದಾಹರೆಗಾಗಿ

1. Microsof 365 - ZOHO work place
2. Watsup - Aratti, huik
3. Google map - Navik, Bhuvan
4. Zoom app - Vani
5. Gmail - Zoho mail
6. Google meet- jio meet
7. Twitter -koo
8. Facebook -Kutumba ,shere chat
9. Google doc -nextcold india
10. GPay - phone pay, paytiam
11. Amazon - flipcart, mesho, snap-deal ಇತ್ಯಾದಿ ಇನ್ನೂ ಅನೇಕ ಪರ್ಯಾಯ ಅಪ್ಲಿಕೇಷನ್ಗಳು ಇವೆ.

ಇತ್ತೀಚಿಗೆ ಭಾರತದ ಟೆಕ್ ಕ್ಷೇತ್ರದಲ್ಲಿ ಅರೆಟ್ಟೈ ತುಂಬಾ ಸದ್ದು ಮಾಡುತ್ತಿದೆ. ಇದನ್ನು ಭಾರತೀಯ ಸಾಫ್ಟೇರ್ ಕಂಪನಿ ZOHO ಅಭಿವೃದ್ಧಿಪಡಿಸಿದ್ದು watsapp ಹಾಗೂ slack ಗೆ ಪರ್ಯಾಯವಾದ ದೇಸಿ ಮೆಸೇಜಿಂಗ್ ಆ್ಯಪ್ ಆಗಿದೆ. ಇದು ಭಾರತದ ಸ್ವದೇಶಿ ಡಿಜಿಟಲ್ ಸ್ವಾವಲಂಬನೆಯಲ್ಲಿ ದೊಡ್ಡ ಕ್ರಾಂತಿಯನ್ನುಂಟು ಮಾಡಿದೆ. ಹೀಗೆ ಭಾರತೀಯ ಟೆಕ್ ಕ್ರಾಂತಿಯು ವಿದೇಶಿ ಆ್ಯಪ್‌ಳಿಗೆ ರೋಧತೆಯನ್ನ ನೀಡಿದೆ. ಇಷ್ಟೇ ಅಲ್ಲದೆ ಟೆಲಿಕಾಂ ವ್ಯವಸ್ಥೆಯಲ್ಲಿಯೂ ಭಾರತದ ಸ್ವದೇಶಿ ಬೆಂಬಲ ಮುನುವರೆದಿದೆ. ಇಂದು ದೇಶದಲ್ಲಿನ ಅರ್ಧದಷ್ಟು ಪಳುಗಳನ್ನ ಜಿಂ ಹಾಗೂ ಏರ್ಟೆಲ್ ನಂತಹ ಕಂಪೆನಿಗಳು ಹಿಡಿತ ಸಾಧಿಸಿವೆ ಆದರೂ, ಇವುಗಳು ವಿದೇಶಿ ಪಾಲುದಾರರನ್ನು ಸಹ ಹೊಂದಿದೆ. ಆದಾಗ್ಯೂ ಭಾರತೀಯ ಟೆಲಿಕಾಂ ವ್ಯವಸ್ಥೆಯಲ್ಲಿ ಸರಕಾರಿ ಸಂಸ್ಥೆಯಾದ BSNL ಇದಕ್ಕೆ ಪ್ರತಿಯಾಗಿ ಪ್ರತಿಸ್ಪರ್ಧಿಯಾಗಿದೆ. ಇದರ ಜೊತೆ ತೇಜಸ್ ನೆಟ್ವರ್ಕ್ ಹಾಗೂ e-DOT ಕೂಡ ಕೈ ಜೋಡಿಸಿವೆ. ಇಂದು ದೇಶದ ಬಹುತೇಕ ಜನರು BSNLನ ಗ್ರಾಹಕರಗುತ್ತಿದ್ದಾರೆ. ಅಲ್ಲದೆ ದೇಶದ ಗ್ರಾಹಕರ ಅವಶ್ಯಕತೆಯನ್ನು ಗಮನದಲ್ಲಿರಿಸಿಕೊಂಡು ಸಮ್ಮಾನ್ ಯೋಜನೆಯನ್ನು ಪರಿಚಯಿಸುತ್ತಿದ್ದಾರೆ. ಅಲ್ಲದೆ ಭಾರತದ ಟೆಲಿಕಾಂ ದೈತ್ಯವಾದ jio, ಸ್ವದೇಶಿ ನಿರ್ಮಿತ 6G ನೆಟ್ವರ್ಕಿಂಗ್ ನಿರ್ಮಿಸುವ ಯೋಜನೆಯಲ್ಲಿದ್ದು ಸಂಪೂರ್ಣವಾಗಿ ಭಾರತೀಯರಿಂದಲೇ ಅಭಿವೃದ್ಧಿಯಾಗುವ ಸಾಧ್ಯತೆ ಇದೆ, ಮೂಲಭೂತ ಅವಶ್ಯಕತೆಯಾಗಿದೆ. ಭಾರತ ಬೆಳೆಯಬೇಕಾದರೆ, ಶಿಕ್ಷಣ ಮತ್ತು ತಂತ್ರಜ್ಞಾನವನ್ನು ನಮ್ಮ ಜೀವನ ವಿಧಾನದಲ್ಲಿ ಅಳವಡಿಸಿಕೊಳ್ಳಬೇಕು. ಜಗತ್ತಿನ ಮಹಾಶಕ್ತಿಯಾದ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ತನ್ನ ಡಿಜಿಟಲೀಕರಣ, ಬಾಹ್ಯಾಕಾಶ, ಮತ್ತು ವಿಜ್ಞಾನದ ಎಲ್ಲಾ ಇತರ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿರುವ ತಾಂತ್ರಿಕ ಅಚ್ಚನ್ನು ಉಳಿಸಿಕೊಳ್ಳಲು ತನ್ನ ಎಲ್ಲಾ ಶಕ್ತಿಯನ್ನೂ ಶ್ರಮಿಸುತ್ತಿದೆ.

ಭಾರತ ಇಂದು ಬಾಹ್ಯಾಕಾಶ ಕ್ಷೇತ್ರದಲ್ಲಿ ವಿಶ್ವವೇ ನಿಬ್ಬೇರಗಾಗುವಂತೆ ಮಾಡಿದೆ. 2023 ಜುಲೈ 14ರಂದು ಭಾರತ ಯಶಸ್ವಿಯಾಗಿ ಚಂದ್ರಯಾನ–3 ಉಡಾವಣೆ ಮಾಡಿ ಜಗತ್ತಿನಲ್ಲಿ ಚಂದ್ರನ ಮೇಲೆ ಯಶಸ್ವಿಯಾಗಿ ಸೆಟಲೈಟ್ ಉಡಾವಣೆ ಮಾಡಿದ ನಾಲ್ಕು ಪ್ರಮುಖ ದೇಶಗಳಲ್ಲಿ ಒಂದಾಯಿತು. ಇಂದು ನಾವು 800 ಕಿಲೋ ಮೀಟರ್ ಎತ್ತರಕ್ಕೆ ಹಾರುವ 1200 ಕೆಜಿ ಭಾರವನ್ನು ಹೊರುವ ಪೋಲಾರ ಸೆಟಲೈಟ್ ಲೌಂಚ್ ವಹಿಕಲ್ (PSLV)ನ್ನು ಹಾಗೂ ಜಿಯಾಸಿಂಕ್ರೊನಸ್ ಸೆಟಲೈಟ್ ಲೌಂಚ್ ವಹೀಕಲ್ (GSLV) ನ್ನು ಉಡಾವಣೆ ಮಾಡಿದೆ. ಮಾರ್ಸ್ ಆರ್ಬಿಟ್ ಮಿಷನ್ (MOM) ಮೂಲಕ ಮಂಗಳಯಾನವನ್ನ ಯಶಸ್ವಿಗೊಳಿಸಿ ಭಾರತ ತನ್ನ ಸಾಮರ್ಥ್ಯವನ್ನು ವಿಶ್ವಕ್ಕೆ ತೋರಿಸಿದೆ ಹಾಗೆಯೇ ಎಲೆಕ್ಟೋ ಮಗ್ನಟಿಕ್ ಸೆಟಲೈಟ್ (EMISIT) ನ್ನು ನಮ್ಮದೇ ಸ್ವದೇಶಿ ರೀಸರ್ಚ್ ಸೆಂಟರ್ DRDO ಇಂದು ರಕ್ಷಣಾ ವ್ಯವಸ್ಥೆಗೆ ವಿಶೇಷವಾದ ಕೊಡುಗೆಯನ್ನು ನೀಡಿದೆ. ಒಟ್ಟಾರೆಯಾಗಿ ಪ್ರಾಕೃತಿಕ ವಿಕೋಪದ ಕಾರ್ಯಾಚರೆಗಳಿಗೆ, ಮಿಲಿಟರಿ ಕ್ಷೇತ್ರಕ್ಕೆ, ಶಿಕ್ಷಣ ವ್ಯವಸ್ಥೆ, ಆರೋಗ್ಯ ವ್ಯವಸ್ಥೆಯಲ್ಲಿ ತನ್ನದೇಯಾದ ಸ್ವದೇಶಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಿದ್ದೇವೆ ಎಂಬುದು ಗಮನಾರ್ಹ ಸಂಗತಿ.

ಭಾರತ ಇಂದು ತನ್ನ ಸೇನಾ ಕ್ಷೇತ್ರದಲ್ಲೂ ಅತ್ಮನಿರ್ಭರವಾಗಿ ಸ್ವದೇಶಿ ತಂತ್ರಜ್ಞಾನದ ಸಹಕಾರದಿಂದ ನಿರ್ಮಿತ ಆಯುಧಗಳು ಯುದ್ಧ ವಿಮಾನಗಳನ್ನು ಹೊಂದಿದೆ. ಇದರಲ್ಲಿ ICA ತೇಜಸ್,NASM -SR ಹೆಲಿಕಾಪ್ಟರ್, ವಿಧ್ವಂಸಕ್ ಮೆಟೀರಿಯಲ್ ರೈಫಲ್, INS ವಿಕ್ರಾಂತ್, INS ಹರಿಯಾಂತ ಹಾಗೂ ಸ್ವದೇಶಿ ನಿರ್ಮಿತ ಮಿಸೈಲ್ಗಳಾದ ಅಗ್ನಿ, ಬೇಹ್ಮೋಸ್, ನಾಗಾ ಮಿಸೈಲ್, ಆಕಾಶ್ ಏರ್ ಮಿಸೈಲ್ ಗಳಿಗೆ ಇಂದು ವಿಶ್ವದಾದ್ಯಂತ ಬೇಡಿಕೆ ಹೆಚ್ಚಿದೆ. ಇಷ್ಟೇ ಅಲ್ಲದೆ ಆರೋಗ್ಯ ಕ್ಷೇತ್ರಗಳಲ್ಲೂ ಭಾರತೀಯ ಸ್ವದೇಶಿ ತಂತ್ರಜ್ಞಾನ ತನ್ನ ಪ್ರಭಾವವನ್ನು ಉಂಟುಮಾಡುತ್ತಿದೆ. ISRO ಮತ್ತು C-DAC (Centre for Development of Advanced Computing) ಅಭಿವೃದ್ಧಿಪಡಿಸಿದ ಟೆಲಿಮೆಡಿಸಿನ್ ಪ್ಲಾಟ್‌ಫಾರ್ಮ್‌ಗಳು ಗ್ರಾಮೀಣ ಭಾಗಗಳಲ್ಲಿ ವೈದ್ಯರು ಮತ್ತು ರೋಗಿಗಳನ್ನು ಸಂಪರ್ಕಿಸುತ್ತಿವೆ. ಈ ವ್ಯವಸ್ಥೆಯ ಮೂಲಕ ದೂರದ ಹಳ್ಳಿಗಳಲ್ಲಿ ವೈದ್ಯಕೀಯ ಸಲಹೆ ಮತ್ತು ನಿರಂತರ ಚಿಕಿತ್ಸೆ ಲಭ್ಯವಾಗಿದೆ. ಭಾರತೀಯ ಕಂಪನಿಗಳಾದ Qure.ai ಮತ್ತು Remedo Health ಕೃತಕ ಬುದ್ಧಿವಂತಿಕೆಯ (AI) ಆಧಾರಿತ ಸಾಫ್ಟ್‌ವೇರ್‌ಗಳನ್ನು ಅಭಿವೃದ್ಧಿಪಡಿಸಿದ್ದು, ಇವು ಎಕ್ಸ್‌ರೇ ಮತ್ತು ಸಿಟಿ ಸ್ಕ್ಯಾನ್ ಚಿತ್ರಗಳನ್ನು ವಿಶ್ಲೇಷಿಸುವಲ್ಲಿ ಸಹಾಯಕವಾಗಿವೆ. ಇಂದು ಭಾರತದಲ್ಲೇ ಆರೋಗ್ಯ ಹಾಗೂ ಶಿಕ್ಷಣಕ್ಷೇತ್ರದಲ್ಲಿ ತಮ್ಮದೇ ಆದ ಸಾಫ್ಟೇರ್ ಗಳು ಅಭಿವೃದ್ಧಿಯಾಗಿವೆ. e-sanjeevini, medilife, Tata 1mg ಹಾಗೂ ಶೈಕ್ಷಣಿವಾಗಿ ಬೈಜೋಸ್ ಹಾಗೂ ಇತರೆ ಸ್ವದೇಶಿ ಪಾಲುದಾರ ಆ್ಯಪ್‌ಗಳ ಬದಲಾಗಿ, NCERT ಅಭಿವೃದ್ಧಿ ಪಡಿಸಿದ DHIK-SHA ಆ್ಯಪ್ ಹಾಗೂ Yogini's gurukul app ಪ್ರಮುಖವಾಗಿವೆ.

**ಸರ್ಕಾರದ ಪ್ರೋತ್ಸಾಹ:**

1. **ಆತ್ಮನಿರ್ಭರ ಭಾರತ (Atmanirbhar Bharat) ಯೋಜನೆ:**

ಇದು ದೇಶೀಯ ಉತ್ಪಾದನೆ ಮತ್ತು ತಂತ್ರಜ್ಞಾನ ಅಭಿವೃದ್ಧಿಗೆ ಉತ್ತೇಜನ ನೀಡುವ ಪ್ರಧಾನ ಮಹತ್ವದ ಕಾರ್ಯಕ್ರಮವಾಗಿದೆ. ಈ ಯೋಜನೆಯಡಿ ಎಲ್ಲಾ ಕ್ಷೇತ್ರಗಳಲ್ಲಿ ಸ್ವದೇಶಿ ಉತ್ಪನ್ನಗಳ್ಗಾಗಿ ಆದಾಯ ತೆರಿಗೆ ರಿಯಾಯಿತಿಗಳು, ಹೂಡಿಕೆ ಸುಲಭತೆ, ಮತ್ತು ಸಂಶೋಧನೆಗೆ ಬೆಂಬಲ ನೀಡಲಾಗುತ್ತಿದೆ

2. **Make in India ಅಭಿಯಾನ:**

ದೇಶೀಯ ಉತ್ಪಾದನೆ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಖಾಸಗಿ ಮತ್ತು ಸರ್ಕಾರಿ ಹೂಡಿಕೆಯನ್ನು ಹೆಚ್ಚುಮಾಡಲು ಈ ಅಭಿಯಾನ ಕೈಗೊಂಡಿದೆ. ವಿಶೇಷವಾಗಿ ರಕ್ಷಣಾ ತಂತ್ರಜ್ಞಾನ ಮತ್ತು ಎಲೆಕ್ಟ್ರಾನಿಕ್ಸ್ ಕ್ಷೇತ್ರಗಳಿಗಾಗಿ ಪ್ರೋತ್ಸಾಹ ಮಾಡಲಾಗುತ್ತಿದೆ

3. **Digital India-Startup India ಯೋಜನೆಗಳು:**

ಡಿಜಿಟಲ್ ತಂತ್ರಜ್ಞಾನ ಮತ್ತು ಸ್ಟಾರ್ಟ್‌ಅಪ್‌ಗಳಿಗೆ ಮಾರ್ಗಸೂಚಿ ಹಾಗೂ ಹಣಕಾಸು ಸಹಾಯ ನೀಡುವ ಮೂಲಕ ನವೋದಯಕ್ಕೆ ಕಾರಣವಾಗಿವೆ. ಮತ್ತು Innovation Support: DRDO, ISRO, ಮತ್ತು CAT ಹಾಗೂ ಹಲವಾರು ತಾಂತ್ರಿಕ ಸಂಸ್ಥೆಗಳಿಗೆ ಗಣನೀಯ ಬಜೆಟ್ ನೀಡಲಾಗಿದ್ದು, ಹೊಸ ತಂತ್ರಜ್ಞಾನ ಸಂಶೋಧನೆಗೆ ವಿದೇಶಿ ತಂತ್ರಜ್ಞಾನ ಮೀಮಾಂಸೆಯನ್ನು ಕಡಿಮೆ ಮಾಡಲು ನೋಡಲಾಗುತ್ತಿದೆ

4. **ಆರ್ಥಿಕ ಮತ್ತು ತೆರಿಗೆ ಪ್ರೋತ್ಸಾಹಗಳು:**

MSME ಗಳಿಗೆ, ತಂತ್ರಜ್ಞಾನ ಆಧಾರಿತ ಕಂಪನಿಗಳಿಗೆ ಆದಾಯ ತೆರಿಗೆ ರಿಯಾಯಿತಿಗಳು ಮತ್ತು ನೂತನ ಮಾರ್ಕೆಟ್ ಚಿಕಿತ್ಸೆಗೆ ಸಹಾಯ, PM-KUSUM, PMAY, ಮತ್ತು ಇತರ ಜನಸಾಮಾನ್ಯ ಯೋಜನೆಗಳು: ಸ್ಥಳೀಯ ತಂತ್ರಜ್ಞಾನ ಆಧರಿತ ಯೋಜನೆಗಳ ಮೂಲಕ ಜನರಿಗೆ ಸುಲಭ ಪ್ರಾಪ್ತಿ ಮತ್ತು ಸುಧಾರಿತ ಸೇವೆಗಳ ಒದಗಿಸುಲು ನೆರವು ನೀಡಲಾಗುತ್ತಿದೆ.

ಇದು ದೇಶೀಯ ಆವಿಷ್ಕಾರಗಳಿಗೆ ಉತ್ತೇಜನ ನೀಡುವ ಮೂಲಕ ನಮ್ಮ ಸಾಂಸ್ಕೃತಿಕ ಮತ್ತು ಭಾಷಾ ವೈವಿಧ್ಯತೆಯನ್ನು ಉಳಿಸಿಕೊಳ್ಳಲು ಸಹಾಯ ಮಾಡುತ್ತದೆ ಮತ್ತು ಜಾಗತಿಕ ದರ್ಜೆಯ ತಂತ್ರಜ್ಞಾನದ ಸತಿಹಾಯದೊಂದಿಗೆ ಭಾರತವನ್ನು ಸ್ಪರ್ಧಾತ್ಮಕ ರಾಷ್ಟ್ರವಾಗಿ ಸ್ಥಾಪಿಸುತ್ತದೆ. ಆದ್ದರಿಂದ, ಸ್ವದೇಶಿ ತಂತ್ರಜ್ಞಾನ ಬಳಕೆ ನಮ್ಮ ದೇಶದ ಭವಿಷ್ಯದ ನಿರ್ಮಾಣಕ್ಕೆ ಅವಿಭಾಜ್ಯ ಅಂಗವಾಗಿದೆ, ಸ್ವಾವಲಂಬಿ ಹಾಗೂ ಪ್ರಬಲ ಭಾರತಕ್ಕೆ ಇದು ನಾಂದಿಯಾಗಿದೆ.

# ತಾಯಿಯಂತೆ ಜೀವನ ಪರ್ಯಂತ ಪೊರೆಯುವ ಗೋವು

ವಾಣಿ ದಾಸ್



ಗೋವು ಭೂಮಿಯ ಮೇಲೆ ಹಲವಾರು ವರ್ಷಗಳಿಂದ ಇರುವಂತಹ ಒಂದು ಸಾದು ಜಾನುವಾರಾಗಿದೆ. ಗೋವಿಗೆ ಭಾರತೀಯ ಹಿಂದೂ ಸಂಸ್ಕೃತಿಯಲ್ಲಿ ತಾಯಿಯ ಸ್ಥಾನವನ್ನು ನೀಡಲಾಗಿದೆ. ತಾಯಿ ಹೇಗೆ ತನ್ನ ಮಗುವಿಗೆ ಎದೆ ಹಾಲನ್ನು ಉಣಿಸಿ ಪೋಷಿಸುತ್ತಾಳೋ, ಅದೇ ರೀತಿ ತಾನಿರುವ ಮನೆಯ ಪ್ರತಿಯೊಬ್ಬರನ್ನು ತನ್ನ ಮಕ್ಕಳಂತೆ ಕಂಡು ಹಾಲುಣಿಸಿ ಸಲಹುತ್ತದೆ.ಈ ಕಾರಣದಿಂದ ಹಿಂದೂ ಧರ್ಮವನ್ನು ಅನುಸರಿಸುವ ಪ್ರತಿಯೊಬ್ಬರು ಗೋವನ್ನು ತಾಯಿಯಂತೆ ಕಾಣುವುದುಂಟು. ಗೋವು ಕೇವಲ ಭಾರತದಲ್ಲಿ ಮಾತ್ರವಲ್ಲದೇ,ಇಡೀ ವಿಶ್ವದಲ್ಲಿ ಕಾಣಿಸಿಕೊಳ್ಳುವ ಒಂದು ಸಾದು ಪ್ರಾಣಿಯಾಗಿದೆ.

ನಿನ್ನೆ ಸಂಜೆ ಸುಮಾರಿಗೆ ನಮ್ಮಕ್ಕನ ಮಗಳು "ಟ್ವಿಂಕಲ್ ಟ್ವಿಂಕಲ್ ಲಿಟಲ್ ಸ್ಟಾರ್ " ಹಾಡನ್ನು ಹಾಡುತ್ತಿದ್ದಳು. ಆಗ ಅದರ ಕನ್ನಡ ಅನುವಾದ ಮಾಡಿದ ಎಸ್ ಜಿ ನರಸಿಂಹಚಾರ್ಯ ನೆನಪಿಗೆ ಬಂದು ಅವರ ಪ್ರಸಿದ್ಧ ಕವನ ಗೋವಿನ ಬಾಳು ನೆನಪಾಯಿತು.

ನಮ್ಮಕ್ಕನ ಹಳೆಯ ಹೈ ಸ್ಕೂಲ್ ಪುಸ್ತಕದಲ್ಲಿ ಅವರ ಕವನ ಇರುವುದು ನೆನಪಿಗೆ ಬಂದು ಓದಬೇಕೆಂದು ತೆಗೆದೆ. ನಿಜ ಹೇಳಬೇಕೆಂದರೆ ಓದಿನಲ್ಲಿ ಅಷ್ಟೇನು ಆಸಕ್ತಿ ಹೊಂದಿರುವ ಜೀವಿ ನಾನಲ್ಲ. ಆದರೂ ಏನಾಯಿತು ಗೊತ್ತಿಲ್ಲ ,ಒಮ್ಮೆ ಓದೇ ಬಿಡೋಣ ಎಂದು ಪುಸ್ತಕ ತೆಗೆದು ಓದಲು ಪ್ರಾರಂಭಿಸಿದೆ.

ಇಟ್ಟರೆ ಸಗಣಿಯಾದೆ ತಟ್ಟಿದರೆ ಕುರುಳಾದೆ
ಸುಟ್ಟರೇ ಸೊಸಲಿಗೆ ವಿಭೂತಿಯಾದೆ
ತಟ್ಟದೇ ಹಾಕಿದರೆ ಮೇಲುಗೊಬ್ಬರವಾದೆ
ನೀನಾರಿಗಾದೆಯೋ ಎಲೆ ಮಾನವಾ, ಹರಿ ಹರಿ ಗೋವು ನಾನು
ಹಾಲಾದೆ ಕರೆದರೆ ಮೊಸರಾದೆ ಹೆತ್ತರೆ
ಮೇಲೆ ಕೆನೆಗಡೆದರೆ ಬೆಣ್ಣೆಯಾದೆ
ಮೇಲಾಗಿ ತುಪ್ಪವೂ ನಾನಾದೆ ಕಾಸಿದರೆ
ನೀನಾರಿಗಾದೆಯೋ ಎಲೆ ಮಾನವಾ, ಹರಿ ಹರಿ ಗೋವು ನಾನು....

ಆಹಾ....! ಎಂಥಾ ಅದ್ಭುತ ಪದ್ಯವದು ಭಾರತದ ಸನಾತನ ಧರ್ಮ ಒಮ್ಮೆ ಕಣ್ಣು ಕಟ್ಟಿದಂತಾಯಿತು.

ಗೋವು ಮನುಕುಲದ ಆರಂಭದಿಂದಲೂ ಮನುಷ್ಯರ ಪ್ರೀತಿಪಾತ್ರವಾದ ಪ್ರಾಣಿಯಾಗಿತ್ತು. ಆರ್ಯರು, ಭಾರತೀಯರ ನಾಗರಿಕ ಪರಂಪರೆಯಲ್ಲಿ ಗೋವಿನ ಬಳಕೆಯ ಮಹತ್ವ ಗೋಚರವಾಗುತ್ತದೆ. ದಿನನಿತ್ಯದ ಚಟುವಟಿಕೆಗಳಲ್ಲಿ ಸಮಭಾಗಿಯಾಗಿದ್ದ ಗೋವನ್ನು ತಾಯಿಯಾಗಿ, ದೇವರಾಗಿ ಪೂಜಿಸುವ ಸಂಸ್ಕೃತಿ ಬೆಳೆಯುತ್ತಾ ಬಂತು. ಮನುಷ್ಯರಿಗೆ ಅಮೃತ ಸದೃಶವಾದ ಹಾಲನ್ನು ನೀಡುವ ಕಾಮಧೇನುವಿಗೆ ಜನ್ಮ ಕೊಟ್ಟ ತಾಯಿಯ ಸ್ಥಾನವನ್ನು ನೀಡಿದ ಹಿರಿಮೆ ಪರಂಪರೆ ನಮ್ಮದು. ಹಾಗಾಗಿ ಭಾರತೀಯ ಆಹಾರ ಸಂಸ್ಕೃತಿಯಲ್ಲಿ ಹಾಲು, ಹಾಲಿನ ಉತ್ಪನ್ನಗಳಿಂದ ತಯಾರಿಸಿದ ಖಾದ್ಯಗಳಿಗೆ ವಿಶೇಷ ಸ್ಥಾನಮಾನವಿದೆ.

ದನದ ಸಗಣಿ ಕೃಷಿ ಭೂಮಿಗೆ ಅತ್ಯುತ್ತಮ ಗೊಬ್ಬರ. ಕೈಗಾರೀಕರಣಕ್ಕಿಂತ ಮೊದಲು ಕೃಷಿಗೆ ಮೂಲಭೂತವಾಗಿ ದನದ ಸಗಣಿಯಿಂದ ತಯಾರಿಸಿದ ಗೊಬ್ಬರವನ್ನು ಭಾರತದ ಕೃಷಿಕರು ಬಳಸುತ್ತಿದ್ದರು. ಹಾಗಾಗಿ ಆರೋಗ್ಯಕರವಾದ ಆಹಾರ ಬೆಳೆಗಳನ್ನು ಬೆಳೆಯುತ್ತಿದ್ದರು. ಆಧುನಿಕ ಭಾರತದಲ್ಲಿ ಸಾವಯವ ಕೃಷಿ ಪದ್ಧತಿಯಲ್ಲೂ ಗೋಮೂತ್ರ, ಗೋಮಯಗಳಿಗೆ ವಿಶೇಷ ಸ್ಥಾನ ದೊರಕಿದೆ. ಕಹಿಬೇವು ಹಾಗೂ ಸೀಗೆಯೊಂದಿಗೆ ಬೆರೆಸಿದ ಗೋಮೂತ್ರವು ಕೃಷಿ ಭೂಮಿಗೆ ಜೀವಜಲವಾಗಿ, ಇದು ಭೂಮಿ ತಾಯಿಯ ಮಣ್ಣನ್ನು ಫಲವತ್ತಾಗಿ ಮಾರ್ಪಡಿಸುತ್ತದೆ.

ಸಮೃದ್ಧತೆ ಭಾರತೀಯ ಕೃಷಿ ಪರಂಪರೆಯ ವಿಶೇಷತೆ. ನಮ್ಮಲ್ಲಿ ಬೆಳೆಯುವ ಕೃಷಿ ಉತ್ಪನ್ನಗಳಲ್ಲಿ, ನಮ್ಮ ಈ ಪುಣ್ಯಭೂಮಿಯಲ್ಲಿ ಎಲ್ಲ ವಿಧದ ದವಸ ಧಾನ್ಯಗಳು, ದ್ವಿದಳ ಧಾನ್ಯಗಳು, ಹಣ್ಣು ತರಕಾರಿಗಳು, ಫಲ ಪುಷ್ಪಗಳು, ರೇಷ್ಮೆ, ಹೀಗೆ ದೇಶದ 70% ಜನರು ಕೃಷಿಯನ್ನೇ ಜೀವನವವನ್ನಾಗಿ ಮಾಡಿಕೊಂಡಿದ್ದಾರೆ. ಇಂತಹ ಅಗಾಧ ಪರಂಪರೆಯ ಮಹತ್ವದ ಮೈಲಿಗಲ್ಲುಗಳಾಗಿ ಗೋಸಂತತಿ ಕೃಷಿಕರ ಒಡನಾಡಿಯಾಗಿದೆ. ಉಳಲು, ಗಾಡಿ ಎಳೆಯಲು, ನೀರಾವರಿಗೆ, ಗೊಬ್ಬರವಾಗಿ ಕೀಟನಾಶಕವಾಗಿ ಗೋವುಗಳು ಸಮೃದ್ಧ ಕೃಷಿಯ ಪಾಲುದಾರರಾಗಿವೆ. ಕೃಷಿ ಪರಂಪರೆಯಲ್ಲಿ ಸಣ್ಣ ಹಿಡುವಳಿದಾರರ ಜೀವನದಲ್ಲಿ ಗೋವಿನಷ್ಟು ಉಪಕಾರಿಯಾಗುವ ಇನ್ನೊಂದು ಪರ್ಯಾಯ ಜೀವಿ ಇಲ್ಲ. ಉಳುಮೆಯ ಎತ್ತುಗಳ ಗೊರಸು, ನೇಗಿಲು ಟ್ರ್ಯಾಕ್ಟರ್ ಮಾಡುವ ಹಾಗೆ ಭೂಮಿಗೆ ಯಾವುದೇ ರೀತಿಯ ಹಾನಿ ಮಾಡುವುದಿಲ್ಲ. ಉಳುಮೆಯ ಹೊತ್ತಿನಲ್ಲಿ ಅವು ವಿಸರ್ಜಿಸುವ ಗೋಮುತ್ರ, ಗೋಮಯಗಳು ಭೂಮಿಯ ಸಾವಯವ ಗೊಬ್ಬರ ಹಾಗೂ ಕೀಟನಾಶಕವಾಗಿ ಉಪಯುಕ್ತವಾಗುತ್ತವೆ. ಪರಿಸರ ಜನ್ಯ ದನದ ಸಗಣಿ ಅತ್ಯುತ್ತಮ ಸಾವಯವ ಗೊಬ್ಬರವಾಗಿ, ಒಣಗಿದ ಎಲೆ, ಎಲೆಹುಳು ಹಾಗೂ ಸ್ಲರಿ ಗೊಬ್ಬರಗಳ ರೂಪದಲ್ಲಿ ಭೂಮಿಯ ಫಲವತ್ತತೆಯನ್ನು ದ್ವಿಗುಣಗೊಳಿಸುತ್ತದೆ. ಇದು ರಾಸಾಯನಿಕ ತ್ಯಾಜ್ಯವನ್ನು ಕೂಡಾ ಉತ್ಪಾದಿಸುವುದಿಲ್ಲ. ಶೇಕಡಾ 99 ರಷ್ಟು ಕೀಟಗಳು ಪರಿಸರ ವ್ಯವಸ್ಥೆಗೆ ಉಪಕಾರಿಗಳು. ಗೋಮುತ್ರ ಹಾಗೂ ಗೋ ಉತ್ಪನ್ನಗಳಿಂದ ತಯಾರಿಸಿದ ಕೀಟನಾಶಕಗಳನ್ನು ಸಿಂಪಡಿಸುವುದರಿಂದ ಇಂತಹ ಉಪಕಾರಿ ಕೀಟಗಳು ಸಾಯುವುದಿಲ್ಲ. ಒಂದು ದನದ ಸಗಣಿ ಐದು ಎಕ್ಕರೆ ಭೂಮಿಯ ಫಲವತ್ತತೆಯನ್ನು ವೃದ್ಧಿಸಬಲ್ಲದು. ಹಾಗೆ ಒಂದು ದನದ ಮೂತ್ರ ಹತ್ತು ಎಕರೆ ಭೂಮಿಯ ಕೀಟಗಳನ್ನು ನಿಯಂತ್ರಿಸುವ ಗುಣ ಹೊಂದಿದೆ. ದೇಶದ ಸರ್ವೋಚ್ಚ ನ್ಯಾಯಾಲಯ ತಿಳಿಸಿರುವಂತೆ, ಒಂದು ಎತ್ತಿನ ಸಗಣಿ ನಾಲ್ಕು ಜನರ ಕುಟುಂಬವನ್ನು ಪೋಷಿಸಬಲ್ಲದು. ರಾಸಾಯನಿಕ ಗೊಬ್ಬರಗಳಿಗೆ ಹೋಲಿಸಿದರೆ ದನದ ಸಗಣಿಯಿಂದ ತಯಾರಿಸಿದ ಗೊಬ್ಬರ ಐದು ಪಟ್ಟು ನೀರನ್ನು ಉಳಿಸುತ್ತದೆ ಎಂದು ತಿಳಿಸಿದೆ. ಸನಾತನ ಧರ್ಮದಲ್ಲಿ ಗೋವನ್ನು ಪೂಜಿಸುವುದು ನಿಜ.ಆದರೆ ಗೋವು ತಾನಿರುವ ಯಾವುದೇ ಧರ್ಮದ ಮನೆಯಲ್ಲಾದರೂ ಇದೇ ರೀತಿಯಲ್ಲಿ ಉಪಕಾರ ಮಾಡುತ್ತದೆ. ಆದರೂ ಅದರ ನೆರವನ್ನು ಮರೆತು ಅದು ತನ್ನ ಕೊನೆಗಾಲದಲ್ಲಿ ಬಲಹೀನವಾದಾಗ ಅದನ್ನು ಕಡಿದು ತಿನ್ನುವ ಬಾಯಿಗೆ ಕೆಲ ಹಣಕ್ಕಾಗಿ ಮಾರುವವರ ಸಂಖ್ಯೆ ದಿನನಿತ್ಯ ಹೆಚ್ಚುತಲೆ ಇದೆ. ಸನಾತನ ಧರ್ಮದಲ್ಲಿ ಇದ್ದವರೂ ಈ ರೀತಿಯ ಕೃತ್ಯದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಜನ್ಮ ನೀಡಿದ ತಾಯಿಯನ್ನೇ ತನ್ನ ವೃಧಾಪ್ಯದಲ್ಲಿ, ವೃದ್ಧಾ ಶ್ರಮಕ್ಕೆ ಅಟ್ಟುವರ ಮಧ್ಯೆ ಹೆಚ್ಚಿನದ್ದನ್ನು ಬಯಸಿ ಫಲವಿಲ್ಲ.

ಪ್ರಧಾನ ಸಂಪಾದಕ: ಹರಿಪ್ರಕಾಶ ಕೋಣೆಮನೆ, ಸಹಾಯಕ ಸಂಪಾದಕ: ವಿನಯ ಹೆಗಡೆ, ವೆಂಕಟೇಶ ಗೇರಗದ್ದೆ, ಸ್ಫೂರ್ತಿ ಹೆಗಡೆ. ಪೂಜಾ ಹುನಕುಪ್ಪಿ, ವಿದ್ಯಾರ್ಥಿ ಸಂಪಾದಕರು: ವಾಣಿ ದಾಸ್, ಪ್ರಭು ವಡ್ಡರ್, ಕಾರ್ತಿಕ ಹಳಿಜೋಳ, ಶರಣಬಸಪ್ಪ
ವಿಳಾಸ: ವಿಶ್ವದರ್ಶನ ಶಿಕ್ಷಣ ಸಂಸ್ಥೆ ಗಣೇಶಪುರಂ, ಯಲ್ಲಾಪುರ. ಸಂಪುಟ-3 ಸಂಚಿಕೆ-2